ಎರಡೂ ಕೈಲಿ ಎರಡೂ ಕಡೆ ಮೀಸೆಯನ್ನು ಸವರಿ ನಿಮಿರಿಸುತ್ತ, ನಗುತ್ತಿದ್ದರೆ ಬಾಚಿದ ಕೆಂಪು ಹಲ್ಲುಗಳ ಸಾಲು ಮೈನವಿರೇಳುವಂತೆ ಮಾಡಿತು. ಅರೆ ಶಬ್ದಕ್ಕೆ ತಾಳ ಹಾಕಿದಂತೆ ಕಾಲುಗಳನ್ನು ಕುಣಿಸುತ್ತಾ ನಿಧಾನವಾಗಿ ಚಲಿಸಿ ವೇದಿಕೆಯ ಮೇಲೆ ಬಂದಿತು. ವೇದಿಕೆಗೆ ಬಂದ ತಕ್ಷಣ ಒಂದು ಮೇಕೆ ಮರಿಯನ್ನು ಅವನ ಕೈಗೆ ತಂದುಕೊಟ್ಟರು. ಬಹಳ ಚಿಕ್ಕರಿ. ಅವನು ಹಿಡಿದ ತಕ್ಷಣ 'ಮಿಹೆ ಮಿಹೆ' ಅಂತ ಓಡಿ ಹೋಯಿತು. ತಕ್ಷಣ ಅವನ ಹಿಂದೆ ಕತ್ತಿ ಹಿಡಿದು ನಡೆಯುವ ಭಂಟನಿರುತ್ತಾನೆ. ಅವನು ಓಡಿ ಹೋಗಿ ಅದನ್ನು ಹಿಡಿದು ತಂದು ಪೋತರಾಜನ ಕೈಲಿ ಕೊಟ್ಟನು. ಪೋತರಾಜ ಬಿಗಿಯಾಗಿ ಹಿಡಿದು ಆ ಮೇಕೆಯ ತಲೆ ಸವರಿದ. ಮತ್ತೆ ಅದನ್ನು ಭುಜದ ಮೇಲೆ ಇರಿಸಿಕೊಂಡು ಒಂದು ಸುತ್ತು ಕುಣಿಯುತ್ತಾ ಬಂದ. ಮತ್ತೆ ಒಂದು ಬಾರಿ ಮೇಕೆಯನ್ನು ಕುತ್ತಿಗೆಯ ಸುತ್ತ ಹಾಕಿಕೊಂಡು ಅದೇ ಶಬ್ದಕ್ಕೆ ತಕ್ಕ ಹಾಗೆ ಹಿಂದೊಂದು ಕಾಲು ಮುಂದೊಂದು ಕಾಲು ಹಾಕ್ಕೊಂಡು ಚಲನೆ ಮಾಡುತ್ತಿದ್ದ. ಒಂದೊಂದು ಬಾರಿ ಜೋಲಿ ಆಡಿದಂತೆ, ಜೋಲಿ ಹೊಡೆದಂತೆ ಮೇಕೆಯನ್ನು ಮುದ್ದಾಡಿ ರಮಿಸುತ್ತಿದ್ದ. ಜನ ಅವನ ವಿಕಾರವಾದ ಮುದ್ದಾಟ ನೋಡಿ ಆಶ್ಚರ್ಯ ಪಡುತ್ತಿದ್ದರು. 'ಏಕೆ ಹೀಗೆ ಹೆಂಡತಿಯನ್ನು ರಮಿಸಿದಂತೆ ಈ ಮೇಕೆಯನ್ನು ರಮಿಸುತ್ತಿದ್ದಾನೆ ಪೋತರಾಜ' ಅಂತ ಕಣ್ಣುಮಿಟುಕಿಸದೆ ನೋಡುತ್ತಿದ್ದರು. ಒಂದೊಂದು ಬಾರಿ ಜನರ ಕಡೆ ತಿರುಗಿ ಮೋಡಿ ಹಾಕಿದ ಹಾಗೆ ನಗುತ್ತಿದ್ದ. ಜನ ಅವನ ನಗೆಗೆ ಮರುಳಾಗಿ ಹೋಗಿದ್ದರು. ಆ ಕ್ರೂರವಾದ ಹಲ್ಲಿನ ಸಾಲುಗಳೇ ಆಕರ್ಷಣೀಯವಾಗಿತ್ತು. ಅರೆಯ ಶಬ್ದ ಜೋರಾಗಿ ಹೋಗಿತ್ತು. ಆ ರೀತಿ ಜೋರಾದಾಗಲೆಲ್ಲಾ ಪೋತರಾಜ ಮೇಕೆಮರಿಯನ್ನು ತನ್ನ ಬಾಯಿ ಹತ್ತಿರ ಎಳೆದುಕೊಂಡು ಇನ್ನೇನು ಹಲ್ಲು ಹಾಕಬೇಕಿತ್ತು. ತಕ್ಷಣ ಅದರ ಬಾಯಿಗೆ ಮುತ್ತನಿಟ್ಟ. ಜನ ನಿಬ್ಬೆರಗಾದರು. ಆ ಮೇಕೆಯನ್ನು ಪಕ್ಕದಲ್ಲಿದ್ದವನಿಗೆ ನೀಡಿದಾಗ ಅವನು ಅದರ ಕುತ್ತಿಗೆಯ ಮೇಲಿದ್ದ ಕೂದಲನ್ನು ತೆಗೆದು ಹದಮಾಡಿಕೊಟ್ಟನು. ಮೇಕೆ ಮತ್ತೆ ಪೋತರಾಜನ ಕೈಗೆ ಬಂತು. ಎರಡೂ ಕೈಲಿ ಹಿಡಿದು ತಲೆಸವರಿ ಕುತ್ತಿಗೆ ಬಳಿ ಕೈ ಆಡಿಸಿದ. ಎಲ್ಲಿ ಬಾಯಿ ಹಾಕಿದರೆ ಸಾಯುತ್ತದೆ ಎಂದು ಮುಟ್ಟಿ ಮುಟ್ಟಿ ನೋಡುತ್ತಾ ಕುತ್ತಿಗೆಯ ಬಳಿ ಮೃದುವಾದ ಭಾಗದಲ್ಲಿ ಸವರುವಾಗ ಅರೆ ಶಬ್ದ ಡರ ಡರರ ಡರ ಡರರ ಎಂದು ಇಮ್ಮಡಿಸಿತು. ಪೋತರಾಜ ಇನ್ನೇನು ಬಾಯಿ ಹಾಕಬೇಕು ಕುತ್ತಿಗೆಗೆ ಅನ್ನುವಷ್ಟರಲ್ಲಿ ಶ್ರೀರಾಮ್ ತಂಡದವರು, 'ಧಿಕ್ಕಾರ ಧಿಕ್ಕಾರ ಪ್ರಾಣಿ ಹಿಂಸೆಗೆ ಧಿಕ್ಕಾರ, ಧಿಕ್ಕಾರ ಧಿಕ್ಕಾರ ಮೂಢನಂಬಿಕೆಗೆ ಧಿಕ್ಕಾರ, ಧಿಕ್ಕಾರ ಧಿಕ್ಕಾರ ಅಮಾನವೀಯತೆಗೆ ಧಿಕ್ಕಾರ' ಅಂತ ಕೂಗಿದರು. ನೂರು ಜನ ವಿಚಾರವಂತರು ವೇದಿಕೆ ಮೇಲೆ ಹತ್ತಿ ಮೇಕೆ ಮರಿಯನ್ನು ಕಿತ್ತುಕೊಂಡು ಕೆಳಗೆ ಓಡಲು ಬಿಟ್ಟರು. ವೀರಾವೇಶದಿಂದ ಭಾಷಣ ಮಾಡಿದ ಶ್ರೀರಾಮ್. ಜನ ನಡೆಯುತ್ತಿರುವ ಘಟನೆಗೆ ಮೂಕಸಾಕ್ಷಿಗಳಂತೆ ದಿಗ್ಭ್ರಾಂತರಾಗಿ ನೋಡುತ್ತಿದ್ದರು. ಪೋತರಾಜನನ್ನು ಪೊಲೀಸರಿಬ್ಬರು ಹಿಡಿದುಕೊಂಡರು.

'ಮಾನ್ಯರೇ, ಈ ಮೂಢನಂಬಿಕೆಯನ್ನು ದೈವೀಕತೆ ಎಂದು ಭಾವಿಸುತ್ತಿದ್ದೀರಿ. ಈ ಹಿಂಸೆಯಿಂದ ದೇವಿಯನ್ನು ತೃಪ್ತಿಗೊಳಿಸಬೇಡಿ. ಮಾರಮ್ಮತಾಯಿಯ ನೆಪದಲ್ಲಿ ಈ ಜನ ವಿಕಾರ ರೂಪ ತಾಳುತ್ತಾರೆ. ದಯವಿಟ್ಟು ತಾಯಿಗೆ ಹಣ್ಣುಕಾಯಿ, ಹೂ ಅಲಂಕಾರ ಮಾಡಿ, ಆರತಿ ಮಾಡಿ, ಈ ಬಲಿ ತೆಗೆದುಕೊಳ್ಳುವುದು ಅವೈಜ್ಞಾನಿಕ, ಅಮಾನವೀಯ' ಎಂದು ಹೇಳಿದರು. ಅಷ್ಟು ಮಾತಾಡುವ ವೇಳೆಗೆ ಎಂಎಲ್ಎ ಬಂದರು. 'ಯಾರ್‍ರೀ ನಿಮಗೆ ಇದನ್ನು ತಡೆಯಕ್ ಹೇಳಿದ್ದು, ಆ ಎ.ಸಿ.ಸಾಹೇಬ್ರಾ? ನಿಮಗೇನು ಇದೆ ಹಕ್ಕು? ಸರಕಾರಿ ಆದೇಶ ಇದ್ದರೆ ಕೊಡಿ' ಎಂದಾಗ ಶ್ರೀರಾಮ್ ಎ.ಸಿ. ಆದೇಶದ ಪತ್ರ ಎಂಎಲ್ಎ ಕೈಗೆ ಕೊಟ್ಟ. ಎಂಎಲ್ಎ ಅದನ್ನು ಪರಿಶೀಲಿಸಿ ನೋಡಿ, 'ಇದು ಸರಕಾರಿ ಆದೇಶ ಅಲ್ಲ, ಎ.ಸಿ.ಯವರ ಹುಕುಂ ಅಷ್ಟೆ. ಅವರಿಗೆ ಯಾರು ಇಷ್ಟು ಅಧಿಕಾರ ಕೊಟ್ರು? ಊರ ದೇವತೆಯ ಜಾತ್ರೆಗೆ ಈ ಮಟ್ಟದ ಅಪಚಾರ. ಎಲ್ಲಿ ಆ ಮೇಕೆಯನ್ನು ಹಿಡಿದು ತನ್ನಿ' ಎಂದು ಎಂಎಲ್ಎ ಆರ್ಡರ್ ಮಾಡಿದರು. ಮೇಕೆ ಕಾಣಲಿಲ್ಲ. ಎಂಎಲ್ಎ ಅವರ ಭಂಟರೆಲ್ಲ ಮೇಕೆಯನ್ನು ಹುಡುಕಲು ಓಡಿಹೋದರು. ಪೋತರಾಜ ಬಾಯಿತೆರೆದು ಆರ್ಭಟಿಸುತ್ತಿದ್ದ. ಅರೆ ಶಬ್ದ ನಿಂತಿತ್ತು. ಜನ ತಮ್ಮಷ್ಟಕ್ಕೆ ತಾವೇ ಕಾಲಿಗೆ ಚಲನೆ ಹೇಳಿ ನಿಧಾನವಾಗಿ ಚಲಿಸಿದರು. ಕಡೆಗೂ ಮೇಕೆ ಸಿಗಲಿಲ್ಲ. ಎಂಎಲ್ಎ ಮೇಕೆಗಾಗಿ ಕಣ್ಣು ಹಾಯಿಸುತ್ತಾ ನೋಡುತ್ತಿದ್ದರು.

●